SERVICE ABOVE SELF



Rotary

विश्वमित्र:

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –06 ದಿನಾಂಕ : 14–08–2024


## ದಿನಾಂಕ: 14.08.2024 ರ ವಾರದ ಸಭೆಯ ವರದಿ

**ಕ್ಲಬ್ ಅಸೆಂಬ್ಲಿ ಸಭೆ–ರೋಟರಿ ಸಮಿತಿಯ ನಿರ್ದೇಶಕರುಗಳು ಮತ್ತು ಸಮಿತಿ ಚೇರ್ಮನ್‌ಗಳಿಂದ ತಮ್ಮ ಸಮಿತಿಯಿಂದ ಕೈಗೊಂಡ ಮತ್ತು ಆಗಿರುವ ಕಾರ್ಯಚಟುವಟಿಕೆಗಳ ವರದಿಗಳು ಹಾಗೂ ಸದಸ್ಯರಿಂದ ಸಲಹೆ ಸೂಚನೆಗಳನ್ನು ಪಡೆದ ಸಭೆಯಾಗಿತ್ತು. ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಹಾಗೂ ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಉಪಸ್ಥಿತರಿದ್ದು, ಸಭೆ ಯಶಸ್ವಿಯಾಗಿ ನಡೆಯಿತು.**




ಆರಂಭದಲ್ಲಿ ರೊ.ವನಿತಾ ಸಂದೀಪ್‌ರವರಿಂದ "ಎಲೆಗಳು ನೂರಾರು, ಭಾವಗಳು ನೂರಾರು ಎಲ್ಲರ ಬಣ್ಣ ಒಂದೇ" ಎಂಬ ಭಾವಪೂರ್ಣ ಹಾಡಿನಿಂದ ಪ್ರಾರ್ಥನೆಯಾಯಿತು. ರೊ. ವೆಂಕಟರಮಣ ಜಿ. ಹೆಗಡೆಯವರಿಂದ ಸ್ವಾಗತವಾಯಿತು. ರೊ. ವೈ.ಗೋಪಾಲಕೃಷ್ಣ ಗುಪ್ತರವರಿಂದ ರೋಟರಿ ಮಾಹಿತಿ. (ವಿವರ ಬೇರೆಡೆಇದೆ). ಕಾರ್ಯದರ್ಶಿ ರೊ.ಎನ್. ಜಿ. ಉಷಾರವರಿಂದ ಪ್ರಕಟಣೆಗಳು. ಇದೇ ಸಂದರ್ಭದಲ್ಲಿ ರೊ.ಪಿಡಿಜಿ. ಡಾ.ಆರ್. ಡಿ. ಪ್ರಭುರವರು ದಿನಾಂಕ: 09.08.2024 ರಂದು ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಂಡಿದ್ದು, ಅವರು ಅಂದಿನ ಸಭೆಯಲ್ಲಿ ವಿಶೇಷ ಉಪಹಾರದ ವ್ಯವಸ್ಥೆಯನ್ನು ಮಾಡಿದ್ದರು. ಅವರನ್ನು ವೇದಿಕೆಗೆ ಆಹ್ವಾನಿಸಿ, ಪುಷ್ಪಗುಚ್ಛವನ್ನು ನೀಡಿ ಅವರಿಗೆ ಅಭಿನಂದನೆ ಹಾಗೂ ಶುಭ ಹಾರೈಸಲಾಯಿತು.

ಸಭಾ ಕಾರ್ಯಕ್ರಮದಲ್ಲಿ ಮೊದಲಿಗೆ ಕ್ಲಬ್ ಸರ್ವಿಸ್ ನಿರ್ದೇಶಕರಾದ ರೊ. ವೀರಣ್ಣ ಎ. ಹುಗ್ಗಿಯವರು ತಮ್ಮ ಸಮಿತಿಯಲ್ಲಿ ಬರುವ ಚೇರ್ಮನ್‌ಗಳನ್ನು ವೇದಿಕೆಗೆ ಆಹ್ವಾನಿಸಿದರು. ಆ ಸಮಿತಿಯ ಚೇರ್ಮನ್‌ಗಳು ಕೈಗೊಂಡ ಕಾರ್ಯಚಟುವಟಿಕೆಗಳ ಪರಿಚಯ ಮಾಡಿದರು. ರೊ. ವೈ.ಗೋಪಾಲಕೃಷ್ಣ ಗುಪ್ತರವರು ರೋಟರಿ ಮಾಹಿತಿ ನೀಡುತ್ತಿದ್ದಾರೆ. ಬುಲೆಟಿನ್ ಸಂಪಾದಕರಾಗಿ ರೊ. ಎಂ. ಮಾಧವಾಚಾರ್‌ರವರು ತಮ್ಮ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಲವಾರು ಸದಸ್ಯರುಗಳು ಬುಲೆಟಿನ್ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಪತ್ರಿಕೆ ತಮಗೆ ಕಾಗದದ ರೂಪದಲ್ಲಿ ದೊರಕಬೇಕೆಂದೂ ಮೊಬೈಲ್‌ನಲ್ಲಿ ನೋಡುವುದು ಕಷ್ಟವೆಂದರು. ಜಾಹೀರಾತುಗಳನ್ನು ಪಡೆದುಕೊಳ್ಳಿ ಎಂದು




ರೊ. ಮೋಹನ್‌ರವರು ತಿಳಿಸಿದರಲ್ಲದೇ ಅದನ್ನು ರೋಟರಿ ಜಿಲ್ಲೆಯ ಪದಾಧಿಕಾರಿಗಳಿಗೆ ಈಗಿನ ತಂತ್ರಜ್ಞಾನ ಬಳಸಿ ತಲುಪುವಂತೆ ಮಾಡಿರಿ ಎಂದರು. ರೊ. ಪಿಡಿಜಿ. ಡಾ. ಆರ್.ಡಿ.ಪ್ರಭುರವರು ಬುಲೆಟಿನ್ ಬಗ್ಗೆ ಸಕಾರಾತ್ಮಕವಾಗಿ ಮಾತನಾಡಿ, ಎಲ್ಲರಿಗೂ ಕಳುಹಿಸಿ ಎಂದು ತಿಳಿಸಿ, ಈ ಬಗ್ಗೆ ಶ್ರಮಿಸುತ್ತಿರುವ ಶ್ರೀ ಸತ್ಯರವರನ್ನು ಶ್ಲಾಘಿಸಿದರು. ಹಾಜರಾತಿ ಸಮಿತಿಯ ಚೇರ್ಮನ್, ಮಾಜಿ ಸಹಾಯಕ ಗವರ್ನರ್.ರೊ. ಟಿ.ಕೆ.ಎಂ. ಭಟ್‌ರವರು ಮಾತನಾಡಿ, ಈ ಬಗ್ಗೆ ಬಹಳಷ್ಟು ಶ್ರಮಿಸಲಾಗುತ್ತಿದೆ. 10 ಜನರ ತಂಡ ಮಾಡಿದ್ದು ಸದಸ್ಯರುಗಳು ಸಭೆಗಳಿಗೆ, ಮತ್ತಿತರೇ ಕಾರ್ಯಕ್ರಮದಲ್ಲಿ ಹಾಜರಾಗಲು ಕಾರ್ಯಪ್ರವೃತ್ತರಾಗುವಂತೆ ಮಾಡಲಾಗಿದೆ. ಸಾರ್ವಜನಿಕ ಸಮಿತಿ ಚೇರ್ಮನ್, ಮಾಜಿ ಸಹಾಯಕ ಗವರ್ನರ್ ರೊ.ಎಸ್. ದತ್ತಾತ್ರಿಯವರು ಮಾತನಾಡಿ, ನಮ್ಮ ಕಾರ್ಯಚಟುವಟಿಕೆಗಳ ವಿವರಗಳನ್ನು ಸಾರ್ವಜನಿಕರಿಗೆ ತಿಳಿಸಲೋಸುಗ ಪ್ರೆಸ್ ಮೀಟ್ ಮತ್ತಿತರ ಕ್ರಮಗಳನ್ನು ಕೈಗೊಂಡಿದ್ದು, ಈ ಸಾಲಿನಲ್ಲಿ ಕೈಗೊಳ್ಳುವ ಚಟುವಟಿಕೆಗಳನ್ನೂ ಸಹ ಸಾರ್ವಜನಿಕರಿಗೆ ತಿಳಿಸುವ ಕೆಲಸವಾಗ ಬೇಕಾಗಿದೆ ಎಂದರು. ಕ್ಲಾಸಿಫಿಕೇಷನ್ ಸಮಿತಿಯ ಚೇರ್ಮನ್ ರೊ.ರಾಜೇಂದ್ರ ಪ್ರಸಾದ್‌ರವರು ಮಾತನಾಡಿ, ಹಾಲಿ ವಿವಿಧ ಹುದ್ದೆಗಳನ್ನೊಳಗೊಂಡ 141 ಕ್ಲಾಸಿಫಿಕೇಷನ್ ಇದ್ದು ಅದರಲ್ಲಿ 70 ಕ್ಲಾಸಿಫಿಕೇಷನ್‌ಗಳು ಭರ್ತಿಯಾಗಿವೆ. ಉಳಿದ 71 ಕ್ಲಾಸಿಫಿಕೇಷನ್‌ಗಳು ಖಾಲಿ ಇವೆ. ಹಾಲಿ 111 ಜನ ಸದಸ್ಯರುಗಳಿದ್ದೇವೆ ಎಂದರು. ಈ ಬಗ್ಗೆ ಹಿರಿಯ ಸದಸ್ಯರಾದ ರೊ.ಡಿ.ಎಸ್. ನಟರಾಜ್‌ರವರು ಮಾತನಾಡಿ,

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 21–08–2024 ಬುಧವಾರ ಸಂಜೆ 6:45**

ಮುಖ್ಯ ಅತಿಥಿ: **ಶ್ರೀಮತಿ ಸೌಮ್ಯ ಅರಳಪ್ಪ,** ಪಿಡಿಪಿ ಟ್ರೈನರ್

ವಿಷಯ: **Work - Life Balance**

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

ಭರ್ತಿಯಾಗದ ಕ್ಲಾಸಿಫಿಕೇಷನ್‌ಗಳ ಪಟ್ಟಿಯನ್ನು ಬುಲೆಟನ್‌ನಲ್ಲಿ ಮುದ್ರಿಸಲು ಕೋರಿದರು.


ವೊಕೇಶನಲ್ ಸರ್ವಿಸ್ ಸಮಿತಿಯ ನಿರ್ದೇಶಕರಾದ ರೊ. ಕಿಶೋರ್ ಶೀರನಾಳಿಯವರ ಅನುಪಸ್ಥಿತಿಯಲ್ಲಿ ಮತ್ತು ಸಮಿತಿಯ ಚೇರ್ಮನ್‌ಗಳ ಅನುಪಸ್ಥಿತಿಯಲ್ಲಿ ವಿವರಣೆ ನೀಡಲಾಗಿರುವುದಿಲ್ಲ. ಸಮುದಾಯ ಸೇವೆ ಸಮಿತಿಯ ನಿರ್ದೇಶಕರಾದ ರೊ.ಎನ್.ವಿ.ಭಟ್‌ರವರ ಅನುಪಸ್ಥಿತಿಯಲ್ಲಿ ರೊ. ಎನ್. ಜಿ. ಉಷಾರವರು ಸಮಿತಿಯ ಚೇರ್ಮನ್‌ಗಳನ್ನು ವೇದಿಕೆಗೆ ಆಹ್ವಾನಿಸಿದರು. ಸಮುದಾಯ ಆರೋಗ್ಯಾಭಿವೃದ್ಧಿ ಸಮಿತಿಯ ಚೇರ್ಮನ್ ರೊ.ಡಾ. ಹೆಚ್.ಪಿ.ಸಿ. ಶಿವಕುಮಾರ್‌ರವರು ಆಗಮಿಸಿ ವಿವರ ನೀಡಿದರು.ಈ ಸಮಿತಿಯಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ವಿಫುಲವಾದ ಅವಕಾಶಗಳಿವೆ. ಅದರಂತೆ ಈ ಸಾಲಿನಲ್ಲಿ "ನಮ್ಮ ನಡೆ–ಹಳ್ಳಿ ಕಡೆ" ಎಂಬ ಬರಹದಡಿ ಕಾರ್ಯ ಪ್ರವೃತ್ತರಾಗಬೇಕಿದೆ. ನಾವು ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಗಮನವನ್ನು ಕೇಂದ್ರೀಕರಿಸಬೇಕಾಗಿದೆ. ಈಗಾಗಲೇ ನಗರದ ಎಲ್.ಬಿ.ಎಸ್. ನಗರದಲ್ಲಿ ಡಾ.ಪಲ್ಲವಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ ಎಂದರು. ರೋಟರಿ ಫೌಂಡೇಷನ್ ಚೇರ್ಮನ್, ಮಾಜಿ ಸಹಾಯಕ ಗವರ್ನರ್ ರೊ. ಎನ್.ಎಸ್. ಶ್ರೀಧರ್‌ರವರು ಮಾತನಾಡಿ ರೋಟರಿ ಸಭಾಭವನದ ಅಭಿವೃದ್ಧಿ ಕಾರ್ಯಗಳು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಅದಕ್ಕೆ ಬೇಕಾಗಿರುವ ಧನ ಸಹಾಯವನ್ನು ಮಾಡಿ ಎಂದು ಕೋರಿದರು. ಆಶಾಕಿರಣ ಶಾಲೆಯ ಗೌರವ ಕಾರ್ಯದರ್ಶಿಗಳು ಮಾತನಾಡಿ, 36 ಜನ ಮಕ್ಕಳಿದ್ದು 9 ಜನಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ವರದಿ ನೀಡಿದರು.

ರೋಟರಿ 75 ನೇ ವಾರ್ಷಿಕ ದತ್ತಿ ನಿಧಿಯ ಚೇರ್ಮನ್ ರೊ.ಡಿ.ಎಸ್. ನಟರಾಜ್‌ರವರು ಮಾತನಾಡಿ, ಕಾಲೇಜಿನ ಸಿವಿಲ್ ಕೆಲಸಗಳು ಮುಗಿದಿವೆ. ಸುಮಾರು 30 ಜನ ವಿದ್ಯಾರ್ಥಿಗಳು ನೇಮಕಾತಿ ಪಡೆದಿದ್ದಾರೆ. ತಿಂಗಳಿಗೆ ರೂ.85000.00 ದಷ್ಟು ಖರ್ಚು ಬರುತ್ತಿದೆ ಎಂದರು. ಮಹಿಳಾ ಸಬಲೀಕರಣದ ಚೇರ್‌ಪರ್ಸನ್ ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್‌ರವರು ಮಾತನಾಡಿ, ಮಹಿಳಾ ಅಭಿವೃದ್ಧಿಯ ಬಗ್ಗೆ ಸಣ್ಣಪುಟ್ಟ ಕಾರ್ಯಕ್ರಮಗಳಂತೂ ನಡೆಯುತ್ತಿರುತ್ತದೆ. 'ಸೃಷ್ಟಿ'ಯಂತಹ ಕಾರ್ಯಕ್ರಮಗಳನ್ನು ಮಾಡಲು ಬಹಳ ಕಷ್ಟವಿದೆ ನೋಡೋಣ ಎಂದರು. ಹೊಸ ಕಾರ್ಯಕ್ರಮಗಳ ಯೋಜನೆ ನಡೆಯುತ್ತಿದೆ ಎಂದರು.

ಅಂತರರಾಷ್ಟ್ರೀಯ ಸಮಿತಿ ನಿದೇಶಕರಾದ ರೊ. ಹೆಚ್.ಎಸ್. ಮೋಹನ್‌ರವರು, ತಮ್ಮ ಸಮಿತಿಯ ಸುಪರ್ದಿಯೊಳಗೆ ಬರುವ ಕಾರ್ಯಕ್ರಮಗಳ ಬಗ್ಗೆ ಮಾತನಾಡಿದರು. ಟಿ.ಆರ್. ಎಫ್ ಮತ್ತು ಗ್ಲೋಬಲ್ ಗ್ರಾಂಟ್‌ಗಳ ಸಮಿತಿಗಳು ತಮ್ಮ ಕಾರ್ಯ ಯೋಜನೆಗಳನ್ನು ಇನ್ನಷ್ಟೆ ರೂಪಿಸಬೇಕಾಗಿದೆ. ಮುಂದಿನ ದಿನಗಳಲ್ಲಿ ಅದನ್ನು ಕಾರ್ಯಗತ ಗೊಳಿಸಲಾಗುವುದು ಎಂದರು. ಯುವ ಸೇವಾ ವಿಭಾಗದ ನಿರ್ದೇಶಕರಾದ ರೊ.ವೆಂಕಟರಮಣ ಜಿ. ಹೆಗಡೆಯವರು ತಮ್ಮ ಕಮಿಟಿಗಳಾದ ಇಂಟರಾಕ್ಟ್ ಮತ್ತು ರೋಟರಾಕ್ಟ್‌ಗಳ ಬಗ್ಗೆ ಮಾತನಾಡಿದರು. ಇಂಟರಾಕ್ಟ್ ಚೇರ್ಮನ್ ರೊ.ಗಾಯತ್ರಿ ಸುಮತೀಂದ್ರರವರು ಇಂಟರಾಕ್ಟ್‌ನ ಕಾರ್ಯಚಟುವಟಿಕೆಗಳ ಬಗ್ಗೆ ಮಾತನಾಡಿದರು. ಹೊಸದಾಗಿ ಮೇರಿ ಇಮ್ಯಾಕ್ಯುಲೇಟ್ ಶಾಲೆಯಲ್ಲಿ ಇಂಟರಾಕ್ಟ್ ಕ್ಲಬ್ ಪ್ರಾರಂಭವಾಗಿರುವ ಬಗ್ಗೆ ತಿಳಿಸಿದರು. ಇಲ್ಲಿ ಶಾಲೆ ಹೊಸದಾದರೂ ವಿದ್ಯಾರ್ಥಿಗಳು ಶ್ರಮದಾನದಂತಹ ಕಾರ್ಯ ಮಾಡಿದ್ದಾರೆ ಎಂದರು. ರೋಟರಾಕ್ಟ್ ಬಗ್ಗೆ ರೊ.ಎಸ್. ಮಂಜುನಾಥ್‌ರ ಅನುಪಸ್ಥಿತಿಯಲ್ಲಿ ರೊ.ಎನ್.ಜಿ. ಉಷಾರವರು ಮಾತನಾಡಿ, ಈಗಾಗಲೇ ಹೊಸದಾಗಿ ರೋಟರಾಕ್ಟ್ ಪ್ರಾರಂಭ ಮಾಡಲು ಯೋಜಿಸಿದ್ದು ಆ ಬಗ್ಗೆ ತಯಾರಿ ನಡೆಯುತ್ತಿರುವುದರ ಬಗ್ಗೆ ತಿಳಿಸಿದರು.

ರೋಟರಿಜಿಲ್ಲಾ ಪ್ರಾಜೆಕ್ಟ್ (ರೋಟರಿ ಡಿಸ್ಟ್ರಿಕ್ಟ್ ಪ್ರಾಜೆಕ್ಟ್) ಇದರ ನಿರ್ದೇಶಕರೂ ಹಾಗೂ ಮಾಜಿ ಸಹಾಯಕ ಗವರ್ನರ್‌ರವರಾದ ರೊ. ಟಿ.ಕೆ. ಎಂ. ಭಟ್‌ರವರು ಜಿಲ್ಲಾ ಪ್ರಾಜೆಕ್ಟ್‌ಗಳಾದ ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ರಸ್ತೆ ಸುರಕ್ಷತೆ ಇವುಗಳ ಬಗ್ಗೆ ಮಾತನಾಡುತ್ತಾ, ಇದರ ಆಚರಣೆಯನ್ನು ನಾವು ಮಾತನಾಡಿದರೆ ಸಾಲದು ಆಚರಣೆ ಮಾಡಬೇಕು. ರಸ್ತೆ ಸುರಕ್ಷತೆ ಕಾನೂನಿನ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ಜಿಲ್ಲಾ ಪ್ರಾಜೆಕ್ಟ್‌ಗಳ ವಿವರಗಳನ್ನು ತಿಳಿಸಿದರು.














ಖಜಾಂಚಿಯವರಾದ ರೊ.ಎಸ್. ಜಿ. ಗೋಪಾಲ್‌ರವರು ಮಾತನಾಡಿ, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು, ಜುಲೈ 2024 ರೊಳಗಾಗಿ ಸದಸ್ಯತ್ವ ಶುಲ್ಕ ಪಾವತಿ ಮಾಡಿದವರಿಗೆ ನೆನಪಿನ ಕಾಣಿಕೆಯೊಂದನ್ನು ನೀಡುವುದಾಗಿ ತಿಳಿಸಿದ್ದು, ಅದರಂತೆ ಪಾವತಿ ಮಾಡಿದ ಸದಸ್ಯರ ಹೆಸರನ್ನು ಓದಿದರು. ಸಭೆಯಲ್ಲಿ ಹಾಜರಿದ್ದ ಪಾವತಿಸಿದ ಸದಸ್ಯರುಗಳು ವೇದಿಕೆಗೆ ಆಗಮಿಸಿ, ನೆನಪಿನ ಕಾಣಿಕೆ ಪಡೆದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಈಗ ಸಮಿತಿಯ ಚೇರ್ಮನ್‌ಗಳು ತಮ್ಮ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಅದರಂತೆ ಬಹಳಷ್ಟು ಶ್ರಮವಹಿಸಿ ಪೂರ್ಣಗೊಳಿಸಲು ಯತ್ನಿಸುತ್ತೇವೆ ಎಂದರು. ಕೊನೆಯಲ್ಲಿ ರೊ.ರೇಖಾ ಪಾಟೀಲ್‌ರವರು ವಂದನಾರ್ಪಣೆ ಮಾಡಿದರು.

## ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ಸಮವಸ್ತ್ರ ವಿತರಣೆ










ದಿನಾಂಕ: 14–08–2024ರಂದು ಶರಾವತಿ ನಗರದ ವೀಣಾ ಶಾರದ ಪ್ರೌಢಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಿಸುವ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್.ಜಿ. ಉಷಾ ಭಾಗವಹಿಸಿದ್ದರು.

ಯೂನಿಫಾರಂ ಪ್ರಾಯೋಜಕರಾದ ರೊ. ವೀರಣ್ಣ ಎ. ಹುಗ್ಗಿಯವರು ಹಾಗೂ ರೊ. ಸುಮನ್ ರಾವ್‌ರವರ ಪತ್ನಿ ಶ್ರೀ ಕಾಂತಿಯವರು ಸಮವಸ್ತ್ರ ವಿತರಣೆ ಮಾಡಿದರು.

## ಇಂಟರ್‍ಯಾಕ್ಟ್ ಕ್ಲಬ್‌ನ ಪದವೀ ಸ್ವೀಕಾರ ಸಮಾರಂಭ








ದಿನಾಂಕ: 13–08–2024ರಂದು ಗಾಜನೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಇಂಟರ್‍ಯಾಕ್ಟ್ ಕ್ಲಬ್ ಪದವೀ ಸ್ವೀಕಾರ ಸಮಾರಂಭ ನೆರವೇರಿತು. ಅಧ್ಯಕ್ಷರಾದ ರೊ. ಕೆ. ಸೂರ್ಯನಾರಾಯಣ ಉಡುಪ, ಕಾರ್ಯದರ್ಶಿ ರೊ. ಎನ್.ಜಿ. ಉಷಾ, ಇಂಟರ್‍ಯಾಕ್ಟ್ ಕಮಿಟಿ ಚೇರ್ಮನ್ ರೊ. ಗಾಯಿತ್ರಿ ಸುಮತೀಂದ್ರರವರು ಭಾಗವಹಿಸಿದ್ದರು. ಯೂಥ್ ಸರ್ವೀಸ್ ಡೈರೆಕ್ಟರ್ ವೆಂಕಟರಮಣ ಹೆಗಡೆ ಮತ್ತು ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

### Rotary Information by Rtn. Y.Gopalakrishna Guptha

**Rotary South Asia**

TRF Area of Focus committee is formed for major gift initiative committee members from South Asia for 2024-25

1. Rtn. PDG. Deepak Guptha - Environment
2. Rtn. PDG. Suresh Hari - Community & Economic Development
3. Rtn. PDG. Parag Seth - Health
4. Rtn. PDG. Mouthin Patel - Water Sanitation & Hygiene

**From TRF Grant –**

Over 500 house holds in village across West Bengal provided Toilets by Rotary RID 3291 R.C. Calcutta Chowrenghee.

The total project cost was $212000 for 500 Toilets. 19 Community Bath Rooms & 28 Borewells. This work now benefitted around 20000 people across 17 villages.

### Rotary Information
### DISTRICT PROJECTS 2024-25

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety

## Happy Birthday Wishes


*Sreedhar N S*
*15th Aug*


*S.N.Nagaraj*
*18th Aug*


*Pavan M P*
*21st Aug*


*Sumalatha Bhoopalam*
*21st Aug*

**ರೋಟರಿಯ ಉದ್ದೇಶ ನಮ್ಮ – ನಿಮ್ಮೆಲ್ಲರ ಸಂಬಂಧಗಳ ಬೆಸುಗೆ**

## ಸಂಪಾದಕೀಯ



### ಪ್ರೀತಿ ಚೆಲ್ಲಿ – ಜಗವ ಗೆಲ್ಲಿ

ಒಮ್ಮೆ ಕಾಶಿಯ ರಾಜ ಬ್ರಹ್ಮದತ್ತ ರಥದಲ್ಲಿ ಹೊರಟಿದ್ದ. ಎದುರಿಗೆ ಕೋಸಲದ ದೊರೆ ಮಲ್ಲಿಕನ ರಥವೂ ಅದೇ ಹಾದಿಯಲ್ಲಿ ಎದುರಿಗೆ ಬಂದು ನಿಂತಿತು. ಇಬ್ಬರ ರಥಗಳು ಒಮ್ಮೆಗೇ ಸಾಗಿ ಹೋಗಲಾಗದ ಇಕ್ಕಟ್ಟಾದ ದಾರಿ ಅದಾಗಿತ್ತು. ಯಾರಾದರೊಬ್ಬರು ದಾರಿ ಕೊಡಲೇಬೇಕಿತ್ತು. ಆದರೆ ಎರಡೂ ರಾಜರ ಸಾರಥಿಗಳೂ ರಥವನ್ನು ಹಿಂದಕ್ಕೆ ತೆಗೆಯುವುದಿಲ್ಲ ಎಂದು ಹಟಕ್ಕೆ ಬಿದ್ದರು. ನೀನು ಮೊದಲು ರಥ ತೆಗೆದು ನಮಗೆ ದಾರಿ ಬಿಡಬೇಕು ಯಾಕೆಂದರೆ ನಮ್ಮ ರಾಜ ಶ್ರೇಷ್ಠ ಎಂದು ಪರಸ್ಪರ ಜಗಳಕ್ಕೆ ನಿಂತರು. ವಯಸ್ಸಿನಲ್ಲಿ ಕಿರಿಯನಾದ ರಾಜ ಹಿರಿಯ ವಯೋಮಾನದ ದೊರೆಗೆ ಮೊದಲು ದಾರಿ ಬಿಡುವುದು ಧರ್ಮ ಎಂದು ವಾದಿಸಿದರು.

ನೋಡಿದರೆ ಇಬ್ಬರ ವಯಸ್ಸೂ ಒಂದೇ ಆಗಿತ್ತು. ರಾಜ್ಯದ ವಿಸ್ತೀರ್ಣ, ಮನೆತನ, ವಂಶ, ಪಟ್ಟ ರಾಣಿಯರ ಸಂಖ್ಯೆ, ನಡೆಸಿರುವ ದಿಗ್ವಿಜಯಗಳು, ದಾನಾದಿಗಳ ವಿವರವೆಲ್ಲಾ ಲೆಕ್ಕ ಹಾಕಿದರೂ ಯಾರಿಗೆ ಯಾರು ಕಮ್ಮಿ ಇರಲಿಲ್ಲ.

ಕೊನೆಗೆ ಬ್ರಹ್ಮದತ್ತ ಚಕ್ರವರ್ತಿಯ ಸಾರಥಿ ತಾಳ್ಮೆ ತಂದುಕೊಂಡು ಮಲ್ಲಿಕನ ರಥದ ಚಾಲಕನಿಗೆ 'ಅಯ್ಯಾ ಸಾರಥಿ, ನಿಮ್ಮ ಪ್ರಭುವಿನ ಒಳ್ಳೆಯ ಗುಣಗಳು ಯಾವುವು? ಅದನ್ನು ಮೊದಲು ಹೇಳು. ಗುಣದಲ್ಲಿ ಅಧಿಕನಾದವನಿಗೆ ಗುಣ ಕಡಿಮೆಯಾದವನು ದಾರಿ ಬಿಟ್ಟು ಕೊಡಲಿ ಅದೇ ಸರಿಯಾದ ಮಾರ್ಗ' ಎಂದನು. ಆಗ ಮಲ್ಲಿಕ ಅರಸನ ಕಡೆಯವನು 'ನಮ್ಮ ನೃಪನು ದುಷ್ಟರಿಗೆ ದುಷ್ಟ, ಸಾಧುಗಳಿಗೆ ಸಾಧು, ಒಳ್ಳೆಯವರಿಗೆ ಒಳಿತನ್ನೂ ಕೆಟ್ಟವರಿಗೆ ಕೆಡುಕನ್ನು ಮಾಡುತ್ತಾನೆ. ಈತನಲ್ಲಿ ಲವಲೇಶದ ದೋಷವೂ ಇಲ್ಲ' ಎಂದನು.

ಆಗ ಬ್ರಹ್ಮದತ್ತ ರಾಯನ ಸಾರಥಿ 'ನಮ್ಮ ಬ್ರಹ್ಮದತ್ತನು ಕೋಪಗೊಂಡವರನ್ನು ತನ್ನ ಮೃದುತ್ವದಿಂದ ಗೆಲ್ಲುತ್ತಾನೆ. ಕೆಟ್ಟವರನ್ನು ಒಳ್ಳೆಯತನದಿಂದ ಒಲಿಸಿಕೊಳ್ಳುತ್ತಾನೆ. ಜಿಪುಣನನ್ನು ದಾನದಿಂದ ವಶಪಡಿಸಿಕೊಳ್ಳುತ್ತಾನೆ. ಸುಳ್ಳಾಡುವವರನ್ನು ಸತ್ಯದಿಂದ ಜಯಿಸುತ್ತಾನೆ. ಜಗಳವನ್ನು ಮನುಷ್ಯತ್ವದಿಂದ ಪರಿಹರಿಸುತ್ತಾನೆ. ಎಲ್ಲರ ನೋವನ್ನು ಹೃದಯವಿಟ್ಟು ಆಲಿಸುತ್ತಾನೆ. ಕನಸಲ್ಲಿಯೂ ಯಾರ ಕೆಡುಕನ್ನು ಬಯಸದೆ ಪ್ರೀತಿ, ಮಮತೆ ಹಂಚಲು ಚಡಪಡಿಸುತ್ತಾನೆ. ಇವು ನಮ್ಮ ಧಣಿಯ ಗುಣಗಳು. ಹೀಗಾಗಿ ಈಗ ನೀನೇ ರಥವನ್ನು ಹಿಂದಕ್ಕೆ ಒಯ್ಯಬೇಕಾಗುತ್ತದೆ' ಎಂದನು.

ಮಲ್ಲಿಕನ ಸಾರಥಿಗೆ ತಿರುಗಿ ಏನು ಹೇಳುವುದೆಂದು ತೋಚದೆ ಬಾಯಿ ಕಟ್ಟಿ ಹೋಯಿತು. ಆಗ ಎಲ್ಲಾ ಮಾತುಕಥೆ ಕೇಳುತ್ತಿದ್ದ ಕೋಸಲದ ರಾಜ ಮಲ್ಲಿಕನು ಸ್ವತಃ ರಥದಿಂದ ಕೆಳಗಿಳಿದು ಬಂದು ಬ್ರಹ್ಮದತ್ತ ದೊರೆಯ ಕ್ಷಮೆಯನ್ನು ಕೇಳಿದನು. 'ರಾಜ ನಿನ್ನ ಗುಣಗಾನವನ್ನು ಕೇಳಿ ನನಗೆ ಜ್ಞಾನೋದಯವಾಗಿದೆ. ನನ್ನಲ್ಲಿರುವ ದೋಷಗಳು ಯಾವುದೆಂಬುದು ಅರಿವಾಗಿದೆ. ಒಳಿತಿನಿಂದ ಕೆಡಕನ್ನು, ಸತ್ಯದಿಂದ ಸುಳ್ಳನ್ನು ನಾಶಮಾಡುವ ನಿನ್ನ ಗುಣವೇ ಶ್ರೇಷ್ಠ. ತ್ಯಾಗದಿಂದ ಸಂಬಂಧಗಳನ್ನು, ಸಹನೆಯಿಂದ ನೋವನ್ನು ಜಯಿಸಬೇಕು ಎಂಬ ತಿಳಿವಳಿಕೆ ನನಗೀಗ ಸಿಕ್ಕಿದೆ. ರಥಕ್ಕೊಂದು ಸಣ್ಣ ದಾರಿ ಪಡೆಯಲು ಹೊರಟಿದ್ದ ನನಗೆ ಬದುಕಿನ ಹೊಸ ಹೆದ್ದಾರಿಯೇ ದೊರಕಿದೆ. ನಿನಗೂ ನಿನ್ನ ಸಾರಥಿಗೂ ಧನ್ಯವಾದಗಳು' ಎನ್ನುತ್ತಾನೆ.

ಬದುಕಿನಲ್ಲಿ ಒಳ್ಳೆಯವರು ಎದುರಾಗಿ ಅವರ ಸಜ್ಜನ ಗುಣ ಸ್ವಭಾವಗಳು ತಿಳಿದಾಗ, ನಮ್ಮ ದೋಷಗಳು ನಮಗೆ ಎದ್ದು ಕಾಣಿಸುತ್ತವೆ. ನಮ್ಮ ಮನಸ್ಸಿನ ಹುಳುಕುಗಳ ಹೀಗೆ ತೆರೆದು ತೋರಿಸುವವರು ಸದಾ ನಮ್ಮ ಅಕ್ಕಪಕ್ಕದಲ್ಲೇ ಇರುತ್ತಾರೆ. ನಾವು ಕಣ್ತೆರೆದು ನೋಡಬೇಕು ಅಷ್ಟೇ.


• ರೊ. ಎಂ. ಮಾಧವಾಚಾರ್

### ವಿಶೇಷ ಸ್ಪರ್ಧೆ

**ರೋಟರಿ ಕ್ಲಬ್ ಶಿವಮೊಗ್ಗದ ಸದಸ್ಯರಿಗಾಗಿ ವಿಶೇಷ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ವಿಷಯ: 'ಮೇರಾ ಭಾರತ್ ಮಹಾನ್', ಈ ವಿಷಯದ ಬಗ್ಗೆ 2 ನಿಮಿಷಗಳ ಪುಟ್ಟ ಭಾಷಣದ ವೀಡಿಯೋ ಮಾಡಿ ಈ ವೀಡಿಯೋವನ್ನು ದಿನಾಂಕ 22-8-2024ರೊಳಗೆ ಪ್ರೋಗ್ರಾಮ್ ಕಮಿಟಿ ಚೇರ್ಮನ್ ರೊ. ಎನ್.ವಿ. ಭಟ್‌ರವರಿಗೆ ಕಳಿಸಿಕೊಡಿ.**

**ವಾಟ್ಸ್ಪ್ ನಂ. 94481 71923**

### ಮುದ್ದುರಾಮನ ಪದಗಳು



**ಹಿಡಿದುರೆಂಬೆಯ ನೀನು ಅಲ್ಲಾಡಿಸಿದರೇನು ?**
**ಹಸಿರಿರದ ಟೊಂಗೆಯಲಿ ಹೂವು ತುಂಬುವುದೇ?**
**ನೆಲಕೆ ಶ್ರಾವಣ ಬರದೇ ಹನಿ ಅರಸಿ ಸುಖವೇನು ?**
**ಋತು ಒಲಿದರಿದೆ ಚೆಲುವು – ಮುದ್ದುರಾಮ**

### ಕಗ್ಗದ ಮೊಗ್ಗಿನ ಪರಿಮಳ ನಿಮಗಾಗಿ

**ಧನ್ಯತಮವಾ ಗಳಿಗೆ ಪುಣ್ಯತಮವಾ ಗಳಿಗೆ ।**
**ನಿನ್ನ ಮಮತೆಯ ನೂಲ ವಿಧಿಯೆ ಪರಿದಂದು ॥**
**ಉನ್ನತಿಯನಾತ್ಮವನು ತಡೆದಿಡುವ ಪಾಶಗಳು ।**
**ಛಿನ್ನವಾದಂದೆಸೊಗ – ಮಂಕುತಿಮ್ಮ ॥**

ನಿನ್ನ ಮಮತೆಯ ನೂಲನ್ನು ವಿಧಿ ಹರಿದ ಆ ಕ್ಷಣವೇಧನ್ಯತಮ ಹಾಗೂ ಪುಣ್ಯತಮ. ಆತ್ಮೋನ್ನತಿಯನ್ನು ತಡೆದಿಡುವ ಪಾಶಗಳು ತುಂಡಾದಾಗಲೇ ಸುಖದ ಅನುಭವವಾಗುವುದು.

ಮೋಹ ಮಮತೆಗಳನ್ನು ಮನುಷ್ಯತಾನಾಗಿಯೇ ಕಳಚಿಕೊಳ್ಳಲಾರ. ಆದ್ದರಿಂದ ಮಾನ್ಯ ಗುಂಡಪ್ಪನವರು ವಿಧಿ ತಾನಾಗಿಯೇ ಮಮತೆಯನ್ನು ಕಳಚಿ ಹಾಕಿ ಬಿಟ್ಟರೇ ಅದೊಂದು ಧನ್ಯತಮವಾದ ಘಳಿಗೆ. ಅದೊಂದು ಪುಣ್ಯದ ಗಳಿಗೆ ಅಂದಿದ್ದಾರೆ. ನಮ್ಮ ಆತ್ಮೋನ್ನತಿಯನ್ನು ತಡೆಯುವ ಪಾಶಗಳು ಎಂದು ತುಂಡಾಗುತ್ತವೆಯೋ ಅಂದು ನಮಗೆ ನಿಜವಾದ ಸುಖದ ಅನುಭವವಾಗುವುದು. ಮನುಷ್ಯನ ಬದುಕಿನ ಪರಮೋಚ್ಚ ಗುರಿ ಆತ್ಮೋನ್ನತಿ. ಭಗವದ್ಗೀತೆಯಲ್ಲಿ **"ಉದ್ಧರೇತ್ ಆತ್ಮನಾತ್ಮನಂ ನಾತ್ಮಾನಮವಸಾಧಯೇತ್' ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈವರಿಪುರಾತ್ಮನಃ"** ಎಂದು ಹೇಳಲಾಗಿದೆ. ಸದಾ ನಾವು ಆತ್ಮನ್ನೋತಿಯನ್ನು ಮಾಡಿಕೊಳ್ಳಬೇಕು. ಆತ್ಮವನ್ನು ನಾಶಮಾಡಿಕೊಳ್ಳಬಾರದು. ಏಕೆಂದರೆ ಆತ್ಮವೇತನಗೆ ಬಂಧುವು ಕೂಡ ಹಾಗೇ ವೈರಿಯೂ ಕೂಡ. ಪ್ರಾಪಂಚಿಕ ಸುಖ ಸೌಲಭ್ಯಗಳೇ ಸರ್ವಸ್ವ ಎಂದು ತಿಳಿದಿರುವ ಜನರಿಗೆ ಕುವೆಂಪುರವರು ತಮ್ಮ' ಶತಮಾನದ ಸಂಧ್ಯಾ' ಎಂಬ ಕಥೆಯಲ್ಲಿ ಹೀಗೆ ಎಚ್ಚರಿಸಿದ್ದಾರೆ. 'ನೊಣ ಮೀಸೆಯ ಹುಳುಹೆಜ್ಜೆಯ ಎಣಿಸುವ ಬಿಜ್ಜೆಯಬಲ್ಲ ತನ್ನಾತ್ಮವತಾನರಿಯುವ ಸಾಧನೆಯೊಂದನು ಒಲ್ಲ. ಅನ್ವೇಷಣೆ, ಅನ್ವೇಷಣೆ ಸುಖಸಲು ಪುರುಸೊತ್ತಿಲ್ಲ. ತಿಳಿದು ತಿಳಿದು ಕೊನೆಗೇನು ಗೊತ್ತಿಲ್ಲ.

*(ಸಂಗ್ರಹ : ಜಿ. ಸತ್ಯನಾರಾಯಣ)*

### Rotary Information - Rorary Designated Months

| | | |
|---|---|---|
| July | : | Maternal and Child Health Month |
| August | : | Membership and New Club Development Month |
| September | : | Basic Education and Literacy Month |
| October | : | Economic and Community Development Month |
| November | : | Rotary Foundation Month |
| December | : | Disease Prevention and Treatment Month |
| January | : | Vocational Service Month |
| February | : | Pease and Conflict Prevention Month |
| March | : | Water and Sanitation Month |
| April | : | Environmental Month |
| May | : | Youth Service Month |
| June | : | Rotary Fellowships Month |

### ಚಿಂತನ...

**ಜೀವನದಲ್ಲಿರಬೇಕು ಉತ್ಸಾಹ ; ಅದಕ್ಕೆ ಬೇಡ ಯಾರದೂ ಪ್ರೋತ್ಸಾಹ**
**ಅತಿದೊಡ್ಡ ರೋಗವೇ ನಿರುತ್ಸಾಹ ; ಜೀವನೋತ್ಸಾಹ ಒಂದು ಪ್ರವಾಹ**
**ಸಕಲಕ್ಕೂ ಕಾರಣ ಮನಸ್ಸು ; ಮಾಡುವುದು ಯಾವಾಗಲೂ ಸರ್ಕಸ್ಸು**
**ಅದರ ನಿಯಂತ್ರಣ ಒಂದು ತಪಸ್ಸು ; ದೊರೆಯುವುದು ನಮಗಾಗ ಯಶಸ್ಸು**

**– ರೊ. ಎನ್.ಜಿ. ಉಷಾ**

To, Book Post